

# ವಿಜಯಸಿಂಹ

■ ವಿ. ಸತ್ಯನಾರಾಯಣ ರಾವ್, ಬೆಂಗಳೂರು

ಬಹಳ ಹಿಂದೆ ರಾಜದುರ್ಗವನ್ನು ಶೂರಸಿಂಹ ಎಂಬ ರಾಜನು ಧರ್ಮದಿಂದ ರಾಜ್ಯವಾಳುತ್ತಿದ್ದನು. ಹೆಸರಿಗೆ ತಕ್ಕಂತೆ ರಾಜನು ಶೂರ–ಪರಾಕ್ರಮಿ ಧರ್ಮಬೀರುವೂ ಆಗಿದ್ದನು. ಆತನಿಗೆ ಇಬ್ಬರು ರಾಣಿಯರು. ಅನ್ನಪೂರ್ಣ ಮತ್ತು ಸೌಧಾಮಿನಿ. ಅನ್ನಪೂರ್ಣ ಒಂದು ಗಂಡು ಮಗುವನ್ನು ಹಡೆದು ಕಾಯಿಲೆಗೆ ತುತ್ತಾದಳು. ಸೌದಾಮಿನಿಗೆ ಮಕ್ಕಳಿಲ್ಲ. ಗಂಡನಿಗೆ ಸಹಾಯ ಮಾಡಲೆಂದು ತನ್ನ ತಮ್ಮ ಗಜಪತಿಯನ್ನು ತಂದು ಸೈನ್ಯಾಧಿಕಾರಿಯಾಗಿ ಮಾಡಿದ್ದಳು. ಶೂರಸೇನ ತನ್ನ ತಂಗಿ ರಾಜಲಕ್ಷ್ಮಿಯನ್ನು ದೇವದುರ್ಗದ ರಾಜ ಚಂದ್ರಸೇನನಿಗೆ ಕೊಟ್ಟು ವಿವಾಹ ಮಾಡಿದ್ದನು.

ಅನ್ನಪೂರ್ಣ ತನ್ನ ಮಗುವಿನ ನಾಮಕರಣದಂದೇ ಕಾಯಿಲೆ ಉಲ್ಬಣಿಸಿ ಕಣ್ಣು ಮುಚ್ಚಿದಳು. ಶೂರಸಿಂಹ ಚಿಂತಾಕ್ರಾಂತನಾದನು. ಅತ್ತ 'ಅನ್ನಪೂರ್ಣೆಯ ಸಾವಿಗೆ ಮಗುವೇ ಕಾರಣ ಎಂದು ವಾದಿಸಿ ಸೌದಾಮಿನಿ ಮತ್ತು ಗಜಪತಿ ಹಸುಗೂಸನ್ನು ಅಡವಿಯಲ್ಲಿ ಬಿಟ್ಟು ಬರಲು ಹುನ್ನಾರ ಹೂಡಿದರು.

ಶೂರಸಿಂಹ ಚಿಂತೆಯಲ್ಲಿ ಕೃಷನಾದ. ಇಪ್ಪತ್ತು ವರ್ಷಗಳು ಕಳೆದವು. 'ಶೂರಸಿಂಹ ಆಡಳಿತ ನಡೆಸಲು ಅಸಮರ್ಥ' ಎಂದು ವಾದಿಸುತ್ತ, ಸೌಧಾಮಿನಿ ಗಜಪತಿಯನ್ನು ರಾಜನಾಗಿ ಮಾಡಲು ಸಿದ್ಧತೆ ನಡೆಸಿದಳು. ಕಿರೀಟಧಾರಣೆ ದಿನ ರಾಜಧಾನಿ ನವ ವಧುವಿನಂತೆ ಸಿಂಗಾರಗೊಂಡಿತು. ದೇಶ ವಿದೇಶಗಳಿಂದ ಗಣ್ಯರು ಆಗಮಿಸಿದರು. ಶೂರಸೇನ ಮೂಕನಂತೆ ಕುಳಿತಿದ್ದನು. ಇನ್ನೇನು ಕಿರೀಟಧಾರಣೆ ಆಗಬೇಕು ಅನ್ನುವಷ್ಟರಲ್ಲಿ ದೇವದುರ್ಗದ ಅರಸ ಚಂದ್ರಸೇನ 'ನಿಲ್ಲಿಸಿ, ನೀವು ಪಟ್ಟಾಭಿಷಿಕ್ತರಾಗಲು ಅರ್ಹರಲ್ಲ' ಎಂದನು.

ಕೋಪಗೊಂಡ ಗಜಪತಿ 'ನೀವ್ಯಾರು ನನ್ನನ್ನು ತಡೆಯಲು' ಎಂದು ಕೇಳಿದನು.'ನಾನ್ಯಾರೇ ಆಗಿರಲಿ ಸಿಂಹಾಸನ ವಾರಸುದಾರ ಇಲ್ಲಿದ್ದಾನೆ ನೋಡು' ಎಂದನು. ಕೂಡಲೇ ಉದಯ ಸೂರ್ಯನಂತೆ ಕಂಗೊಳಿಸುತ್ತಿದ್ದ ನವಯುವಕ ಕತ್ತಿ ಹಿಡಿದು ಮುಂದೆ ಬಂದ. 'ಈ ಪೋರನೋ ನನ್ನನ್ನು ಎದುರಿಸುವುದು? ಬಾ ನನ್ನ ಕತ್ತಿಗೆ ಆಹುತಿಯಾಗು' ಎಂದನು. ಇಬ್ಬರಿಗೂ ಭಯಂಕರ ಯುದ್ಧವಾಯಿತು. ಗಜಪತಿ ಪೆಟ್ಟು ತಿಂದು ನೆಲಕಚ್ಚಿದ. ಚಂದ್ರಸೇನನು ಭಾವನನ್ನು ಅಪ್ಪಿ 'ಈ ಪರಿಸ್ಥಿತಿ ಬಂದಾಗ ನನಗೆ ಒಂದು ಮಾತು ತಿಳಿಸಬಾರದೇ?' ಎಂದನು ಆಗ ಅದಿರಲಿ ಬಾವಾ ಆ ಯುವಕ ಯಾರು? ಎಂದನು.

'ಆ ವೀರನೇ ನಿನ್ನ ಮಗ ವಿಜಯಸಿಂಹ' ಎಂದನು.

ಏನೂ ಆ ವೀರ ನನ್ನ ಮಗನೇ ಬಾವಾ ಅದು ಹೇಗೆ? ಎಂದನು.

'ನಿನ್ನ ಮೈದ ಗಜಪತಿ ಮಗುವನ್ನು ಕೊಲ್ಲಲು ಹೇಳಿದ್ದ. ನನ್ನ ಭಟರು ಅವರನ್ನು ಕೊಂದು ಮಗುವನ್ನು ತಂದು ನೀಡಿದರು. ಅವನನ್ನು ಬೆಳೆಸಿ ವೀರ ವಿಜಯಸಿಂಹನಾಗಿ ಮಾಡಿದೆ' ಎಂದನು. ಶೂರಸಿಂಹ ಬಾವನನ್ನು ಅಪ್ಪಿ 'ನಿನ್ನ ಉಪಕಾರ ಹೇಗೆ ತೀರಿಸಲಿ' ಎಂದನು. ಅದಕ್ಕೇನು ಬಾವಾ ನನ್ನ ಮಗಳನ್ನು ನಿನ್ನ ಸೊಸೆ ಮಾಡಿಕೊ' ಎಂದನು.

ರಾಜದುರ್ಗದ ಶನಿ ತೊಲಗಿತು. ಸೌದಾಮಿನಿಯನ್ನು ಸೆರೆಗೆ ತಳ್ಳಿದರು. ವಿಜಯಸಿಂಹನ ವಿವಾಹ ವೈಭವದಿಂದ ನಡೆಯಿತು. ಶೂರಸಿಂಹ–ಚಂದ್ರಸೇನ ಆನಂದದಿಂದ ಬಾಳಿದರು.

■